



‘ಅಯ್ಯೋ ರೆಕ್ಕೆ ಕಟ್ಟಾಗಿದೆ’, ‘ಫ್ರೇಮಿಂಗ್ ಮಿಸ್ಸಾಗಿದೆ’, ‘ಲೈಟಾಗಿ ಷೇಕಾಗಿದೆ’ ಎಂಬ ಪ್ರಲಾಪಗಳೇ ಹೆಚ್ಚು. ‘ನಿಮ್ಮದು ಚೆನ್ನಾಗಿ ಬಂದಿದೆ. ನನ್ ಹಾಳಾದ ಕ್ಯಾಮೆರಾಕ್ಕೆ ಏನು ರೋಗಾನೋ’ ಎಂಬ ಕ್ಯಾಕರಿಕೆ ಕೂಡ ಇರುತ್ತೆ. ಬೇಸರ, ಸಂತಸ, ಪಶ್ಚಾತ್ತಾಪಗಳ ನಡುವೆಯೇ ಫೋಟೋಗ್ರಫಿಯ ಕಲಿಕೆ ನಡೆಯುವುದು.

ಆದರೆ ಈ ಸಲ ಹಾಗಾಗಲಿಲ್ಲ. ಪಂಪಯ್ಯ ಆ ಉರಿಬಿಸಿಲಲ್ಲಿ ನಮ್ಮನ್ನು ಪಾಳು ಹೊಲವೊಂದಕ್ಕೆ ಎಳೆದುಕೊಂಡು ಹೋದರು. ತೀವ್ರ ಬಿಸಿಲಲ್ಲಿ ತೆಗೆದ ಪಕ್ಷಿಗಳ ಪಟ ಸುಟ್ಟು ಹೋಗುತ್ತದೆ ಎಂದು ಗೊಣಗಿಕೊಂಡೇ ಹೋದೆವು. ಇದೆಲ್ಲ ಪಂಪಯ್ಯ ತಿಳಿಯದವರೇನಲ್ಲ. ‘ಈ ಪಕ್ಷಿ ಸಿಗೋದೆ ಈ ಹೊತ್ತಲ್ಲಿ ಬನ್ನಿ’ ಎಂದು ಹಟ ಹಿಡಿದ ಕಾರಣ ಸುಮ್ಮನೆ ಹೋದೆವು.

ಮಣ್ಣಿನಿಂದ ಮಾಡಿದ ಗೊಂಬೆಯಂತಿದ್ದ ಅದರ ಹೆಸರು ‘ಚೆಸ್ಟ್ ನೆಟ್ ಬೆಲ್ಲೀಡ್ ಸ್ಯಾಂಡ್ ಗ್ರೋಸ್’ ಎಂದು. ಇಪ್ಪತ್ತೆಂಟು ಸೆಂಟೀಮೀಟರ್ ಉದ್ದವಿರುವ ಇದು ಕಲ್ಲು ನೆಲದಲ್ಲಿ ಗೂಡು ಕಟ್ಟುತ್ತದೆ. ತಕ್ಷಣಕ್ಕೆ ಇದನ್ನು ಕಂಡು ಹಿಡಿಯುವುದೇ ಕಷ್ಟ. ನೆಲದ ಮಣ್ಣಿಗೆ ದೇಹದ ಸೊಗಸನ್ನು ಹೊಂದಿಸಿಕೊಂಡ ಇದು ಉರಿ ಬಿಸಿಲಲ್ಲಿ ಬದುಕುತ್ತದೆ. ಜನ ಓಡಾಡುವ ಜಾಗದಲ್ಲೇ ಕಲ್ಲಿನ ಗೂಡು ಕಟ್ಟಿ ಮರಿ ಮಾಡಿಕೊಳ್ಳುತ್ತದೆ. ಅಪಾಯದ ಅರಿವಾದಾಗ ಫುರ್ ಎಂದು ಹಾರುವ ಸೂಕ್ಷ್ಮ ಸ್ವಭಾವ ಇದಕ್ಕಿದೆ.

ಹುಲ್ಲಿನ ಬೀಜಗಳ ತಿಂದು ಬದುಕುವ ಒಣ ಭೂಮಿಯ ವಾಸಿಯಿದು. ಸಜ್ಜೆ, ನವಣೆ, ರಾಗಿ ಹೊಲಗಳು ಇಲ್ಲವಾಗಿ ವರ್ಷ ಪೂರ್ತಿ ಇರುವ ನೀರಾವರಿ ಮತ್ತು ತೋಟಗಾರಿಕೆ ಬೆಳೆಗಳು ಹೆಚ್ಚಾಗಿ ಇದರ ಬದುಕು ನಾಶವಾಗಿದೆ. ಬಯಲು ಭೂಮಿಯಲ್ಲಿ ಬದುಕುವ ಕಾರಣ ಹಾವು, ಮುಂಗುಸಿ, ಮತ್ತು ನರಿಗಳಿಗೆ ಸುಲಭವಾಗಿ ತುತ್ತಾಗುತ್ತದೆ. ಕಲ್ಲಿನ ನಡುವೆ ಬಾಳುವ ಇದು ಕಲ್ಲನ್ನೇ ತಿನ್ನುತ್ತದೆ ಎನ್ನುವ ನಂಬಿಕೆ ಜನರಲ್ಲಿದೆ. ಹೀಗಾಗಿ ಇದನ್ನು ಕೊಂದು ತಿಂದರೆ ನಮ್ಮ ದೇಹದಲ್ಲಿರುವ ಕಲ್ಲು ಕರಗುತ್ತದೆ ಎಂಬ ಹುಸಿ ನಂಬುಗೆಯಿಂದ ಜನ ಇದರ ಸಂತತಿ ನಾಶವಾಗುವ ಮಟ್ಟಿಗೆ ಬಡಿದು ಕೊಂದು ತಿಂದಿದ್ದಾರೆ. ಸುಡುಭೂಮಿಯಲ್ಲಿ ಬದುಕುವ ಉಳುವ ಹೊಲ ಗದ್ದೆಗಳಿಂದ ದೂರ ಹೋಗಿ ಬಾಳುವ ಇದನ್ನು ಮರುಭೂಮಿಯ ನಿವಾಸಿ ಎಂದರೂ ತಪ್ಪಿಲ್ಲ.

ಬಿಸಿಲಲ್ಲಿ ಬೆಂದು ಬಾಳುವ ಸ್ಯಾಂಡ್ ಗ್ರೋಸ್ ದಿನಾ ಕುಡಿಯುವ ನೀರಿಗಾಗಿ ಐವತ್ತು ಕಿ.ಮೀ.ನಷ್ಟು ಕನಿಷ್ಠ ಪ್ರಯಾಣ ಮಾಡುತ್ತದೆ. ಒಣ ಭೂಮಿಯಲ್ಲಿ ವಾಸ ಮಾಡುವ ಇದು ನೀರಿಗಾಗಿ ಹೀಗೆ ದೂರ ಹೋಗಲೇಬೇಕಾದ ಅನಿವಾರ್ಯತೆಗೆ ಸಿಲುಕುತ್ತದೆ. ತನ್ನ ಮರಿಗಳಿಗೆ ಕುಡಿಯುವ ನೀರು ತರಲು ಅತಿ ದೂರಕೆ ಹಾರುವ ಸ್ಯಾಂಡ್ ಗ್ರೋಸ್ ತನ್ನ ಇಡೀ ದೇಹವನ್ನು ಸ್ಪಂಜಿನಂತೆ ಒದ್ದೆ ಮಾಡಿಕೊಂಡು ಹಿಂತಿರುಗುತ್ತದೆ. ಮರಿಗಳನ್ನು ತನ್ನೊಡಲೊಳಗೆ ಸೆಳೆದುಕೊಂಡು ದೇಹವನ್ನು ಕುಗ್ಗಿಸಿ, ಕಂಪಿಸಿ ನೀರಹನಿಗಳು ಮರಿಗಳ ನಾಲಗೆ ಸೇರುವಂತೆ ಮಾಡುತ್ತದೆ. ಯಾವ ಬಟ್ಟಲೂ ಇಲ್ಲದೆ ದೇಹವನ್ನೇ ಲೋಟ ಮಾಡಿಕೊಂಡು ಗಾಳಿಯಲ್ಲಿ ರೆಕ್ಕೆಯನ್ನು ಸೂಕ್ಷ್ಮವಾಗಿ ಬಡಿಯುತ್ತಾ ನೀರ ಪಸೆ ಮೈಯಿಂದ ಆರದಂತೆ ಕಾಪಾಡಿಕೊಂಡು ಬರುವ ಇದರ ಜಾಣ್ಮೆ ಮತ್ತು ತಾಯ್ತನ ಮೆಚ್ಚುವಂಥದ್ದು. ಒಂದು ಪಕ್ಷಿ ಹೀಗೆ ನೀರು ತರಲು ಹೋದರೆ ಮತ್ತೊಂದು ಮರಿಗಳ ಕಾಯುತ್ತದೆ.

ಸ್ಥಳೀಯವಾಗಿ ಇದನ್ನು ‘ಕಲ್ಲುಳಕ’ ಅಂತಾರೆ. ಎರಡು ಮೂರು ಮೊಟ್ಟೆ ಇಡುತ್ತದೆ. ಗುಂಪಾಗಿ ವಾಸ. ಜನವರಿಯಿಂದ ಮೇ ಗೂಡು ಕಟ್ಟುವ ಕಾಲ. ಭಾರತದ ಮಟ್ಟಿಗೆ ಗುಜರಾತಿನಲ್ಲಿ ಹೆಚ್ಚಾಗಿದೆ. ದೆಹಲಿ ಬಳಿಯ ಗುರ್ಗಾಂವ್, ತೆಲಂಗಾಣ, ಪುಣೆ, ಮತ್ತು ತಮಿಳುನಾಡಿನ ಕೊಯಮತ್ತೂರಿನಲ್ಲೂ ಇವನ್ನು ಕಾಣಬಹುದು. ನಮ್ಮ ಕರ್ನಾಟಕದಲ್ಲಿ ದರೋಜಿ ಕರಡಿ ಧಾಮದ ತಪ್ಪಲಲ್ಲಿ, ನಂತರ ನಂಜನಗೂಡಿನ ಬಳಿಯ ಹುಳಿಮಾವು ಪ್ರದೇಶದ ಆಸುಪಾಸಲ್ಲಿ ಇದರ ಇರುವಿಕೆ ಹೆಚ್ಚಾಗಿದೆ. ಪೇಯಿಟೆಡ್ ಸ್ಯಾಂಡಗ್ರೋಸ್ ಎಂಬ ಪ್ರಭೇದ ಅತ್ಯಂತ ಸುಂದರವಾಗಿದೆ. ಇದರ ಚೆಲುವು ಮತ್ತು ಲಾವಣ್ಯ ಕಂಡು ಸಲೀಂ ಆಲಿಯವರು ‘ವಂಡರ್ ನೆಕ್ಲೇಸ್ ಬರ್ಡ್’ ಎಂದು ಕರೆದಿದ್ದರು. ■